**ಪಾಠ–8** **ಮೇ 19 26**

# ಸೃಷ್ಟಿಕರ್ತನನ್ನು ಆರಾಧಿಸಿರಿ

**ಸಬ್ಬತ್ತಿನ ಮಧ್ಯಾಹ್ನ**

**ಈ ವಾರದ ಅಧ್ಯಯನಕ್ಕಾಗಿ :** ಪ್ರಕಟನೆ 14:6,7; ಮತ್ತಾಯ 24:14; ಗಲಾತ್ಯ 3:22; ಲೂಕ 23:32–43; ಆದಿಕಾಂಡ 22:12; ಪ್ರಕಟಣೆ 14:8–12

**ಸ್ಮರಣ ವಾಕ್ಯ : ಮತ್ತೊಬ್ಬ ದೇವದೂತನು ಆಕಾಶ ಮಧ್ಯದಲ್ಲಿ ಹಾರಿಹೋಗುವುದನ್ನು ಕಂಡೆನು. ಭೂನಿವಾಸಿಗಳಾಗಿರುವ ಸಕಲ ಜನಾಂಗ ಕುಲ ಪ್ರಜೆಗಳವರಿಗೂ ಸಕಲ ಭಾಷೆಗಳನ್ನಾಡುವವರಿಗೂ ಸಾರಿ ಹೇಳುವುದಕ್ಕೆ ನಿತ್ಯವಾದ ಶುಭವರ್ತ ಮಾನವು ಅವನಲ್ಲಿತ್ತು. ಪ್ರಕಟನೆ 14:6.**

ಸೇವೆಂತ್ ಡೇ ಅಡ್ವೆಂಟಿಸ್ಟ್ ಕ್ರೈಸ್ತರಾಗಿ ನಾವು ಸತ್ಯವೇದ ಆಧಾರಿತವಾದ ಪ್ರಸ್ತುತವಾದ ಸತ್ಯವನ್ನುನಂಬುತ್ತೇವೆ. ದೇವರು ಮಾನವನಿಗೆ ಅವಶ್ಯಕತೆ ಇದ್ದ ಹಾಗೆ ಸತ್ಯವನ್ನು ಬಹಿರಂಗ ಪಡಿಸುತ್ತಾನೆ, ಕಾಲಕ್ಕೆ ತಕ್ಕ ಹಾಗೆ ಬೇಕಾದ ಹೆಚ್ಚಿನ ಬೆಳಕನ್ನು ದೇವರು ಅನುಗ್ರಹಿಸುತ್ತಾನೆ. ಮೊದಲನೇಯ ಸುವಾರ್ತೆಯ ವಾಗ್ದಾನ, ಆದಿಕಾಂಡ 3:15 ರಲ್ಲಿ ತೋರಿಬರುವ ಹಾಗೆ ಬಿದ್ದು ಹೋದ ಆದಿ ದಂಪತಿಗಳಿಗೆ ಅವರ ನಿರೀಕ್ಷೆಯು ಸ್ತ್ರೀಯ ಸಂತಾನದಿಂದ ಬರುತ್ತದೆ. ಅಬ್ರಹಾಮನಿಗೆ ನೀಡಿದ ವಾಗ್ದಾನ ಅವನಿಂದ ಬಲಿಷ್ಠವಾದ ಮಹಾಜನಾಂಗವು ಹುಟ್ಟಬೇಕಲ್ಲಾ; ಅವನ ಮೂಲಕ ಭೂಮಿಯ ಎಲ್ಲಾ ಜನಾಂಗಗಳಿಗೂ ಆಶೀರ್ವಾದ ಉಂಟಾಗುವುದಲ್ಲಾ. (ಆದಿಕಾಂಡ 18:18). ಇದು ಸುವಾರ್ತೆಯ ಸಂಪೂರ್ಣವಾದ ಪ್ರಕಟಣೆಯಾಗಿದೆ. ಕ್ರಿಸ್ತನ ಬರೋಣವು ಆತನು ಹೇಳುವ ಪ್ರಕಾರ ಮನುಷ್ಯಕುಮಾರನು ಸಹ ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವುದಕ್ಕೂ ಬಂದನು ಮಾರ್ಕ 10:45. ಇದು ಸುವಾರ್ತೆಯ ಹೆಚ್ಚಿನ ಪ್ರಕಟಣೆಯಾಗಿದೆ.

ಕ್ರಿಸ್ತನ ಬರೋಣಕ್ಕಾಗಿ ಕಾದಿರುವ ಮತ್ತು ಕ್ರೈಸ್ತರ ಎಲ್ಲಾ ನಿರೀಕ್ಷೆಗಳನ್ನು ನೆರವೇರಿಸುವ ಸಮಯದಲ್ಲಿ ಜೀವಿಸುವ ನಮಗೆ ಪ್ರಕಟಣೆ 14:6–12 ರಲ್ಲಿ ತಿಳಿಸಲಾಗಿರುವ ಸಂದೇಶವನ್ನು ಪ್ರಸ್ತುತವಾಗಿರುವ ಸತ್ಯವೆಂದು ಅಂಗಿಕರಿಸುತ್ತೇವೆ. ಈ ವಾರ ಮೊದಲನೇಯ ದೂತನ ಸಂದೇಶದ ಮೇಲೆ ನಮ್ಮ ಗಮನವನ್ನು ಹರಿಸೋಣ, ಯಾಕೆಂದರೆ ಅದರಲ್ಲಿ ಕೊನೆಯ ಕಾಲದ ಕಷ್ಟಸಮಯದಲ್ಲಿ ನಂಬಿಕೆಯಾಗಿ ನಿಲ್ಲುವವರಿಗೆ ಬೇಕಾದ ಸತ್ಯವಿದೆ ಎಂದು ನಾವು ತಿಳಿದುಕೊಳ್ಳೋಣ.

**ಈ ವಾರದ ಪಾಠವನ್ನು ಮೇ 26 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ವಿಶ್ವವ್ಯಾಪಿಯ ಸುವಾರ್ತೆ

**ಪ್ರಕಟಣೆ 14:6, ಮತ್ತಾಯ 24:14, 28:19 ನ್ನು ಓದಿರಿ. ಈ ವಚನಗಳಲ್ಲಿ ಕಾಣುವ ಸಾಮ್ಯತೆ ಏನು? ಈ ವಚನಗಳು ಸುವಾರ್ತೆಸಾರುವುದು ಮತ್ತು ಸಾಕ್ಷಿ ನೀಡುವುದು ಸಭೆಯ ಮೂಲ ಉದ್ದೇಶಕ್ಕೆ ಎಷ್ಟು ಪ್ರಾಮುಖ್ಯ ಎಂದು ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತವೆ?**

ಒಂದು ವಿಧದಲ್ಲಿ ಹೇಳುವುದಾದರೆ ಮೊದಲನೇಯ ದೂತನ ಸಂದೇಶವು ಮಹಾ ಜವಾಬ್ದಾರಿಯ ಸಂದೇಶವನ್ನು ಸಾರುತ್ತದೆ. (ಮತ್ತಾಯ 28:19) ಇದನ್ನು ಕೊನೆಯ ದಿನಗಳ ಹಿನ್ನಲೆಯಲ್ಲಿ ನೀಡಲಾಗಿದೆ. ಇದು ಪ್ರಸ್ತುತವಾಗಿರುವ ಸತ್ಯವಾಗಿದೆ.

ಈ ಮೂರು ವಚನಗಳು ಕೂಡ ಸುವಾರ್ತೆಯನ್ನು ಲೋಕದ ಎಲ್ಲಾ ಕಡೆಗೆ ತೆಗೆದುಕೊಂಡು ಹೋಗುವ ವಿಷಯುವನ್ನು ಒತ್ತಿ ಹೇಳುತ್ತದೆ. ಎಲ್ಲಾ ದೇಶಗಳವರಿಗೂ, ಮತ್ತು ಪ್ರತಿಯೊಂದು ದೇಶ, ಕುಲ , ಭಾಷೆ ಮತ್ತು ಜನರಿಗೆ

ಇದನ್ನು ಸಾರಬೇಕಾಗಿದೆ. ಬೇರೆ ಅರ್ಥದಲ್ಲಿ ನೋಡುವುದಾದರೆ ಈ ಸಂದೇಶಕ್ಕೆ ವಿಶ್ವವ್ಯಾಪಿಯ ಹಿನ್ನಲೆಯಿದೆ. ಪ್ರತಿಯೊಬ್ಬ ಪ್ರಜೆಯು ಇದನ್ನು ಕೇಳಬೇಕು.

ಗಲಾತ್ಯ 3:22 ನ್ನು ಓದಿರಿ. ಲೋಕದ ಎಲ್ಲರೂ ಕೂಡ ಸುವಾರ್ತೆಯನ್ನು ಯಾಕೆ ಕೇಳಬೇಕು ಎಂದು ಅರ್ಥ ಮಾಡಿಕೊಳ್ಳಲು ಈ ವಚನ ನಮಗೆ ಹೇಗೆ ಸಹಾಯ ಮಾಡುತ್ತದೆ.

---

---

ವಿಶ್ವವ್ಯಾಪಿಯ ಪಾಪವು, ವಿಶ್ವವ್ಯಾಪಿಯ ಸುವಾರ್ತೆ ಮತ್ತು ವಿಶ್ವವ್ಯಾಪಿಯ ನಮ್ಮ ಕರೆಯುವಿಕೆಯನ್ನು ತಿಳಿಸುತ್ತದೆ. ಪ್ರತಿಯೊಂದು ದೇಶ, ಕುಲ, ಭಾಷೆ, ಮತ್ತು ಜನರು ಎಲ್ಲರೂ ಕೊಡ ಪಾಪಕ್ಕೆ ಒಳಗಾಗಿದ್ದಾರೆ, ಮತ್ತು ದೇವರ ಆಜ್ಞೆಗಳನ್ನು ಮೀರಿದ್ದಾರೆ, ಮತ್ತು ಎಲ್ಲರೂ ಪಾಪದ ಅಧೀನಕ್ಕೆ ಒಳಗಾಗಿದ್ದಾರೆ. ಎದೆನ್ ತೋಟದಲ್ಲಿ ಅದಾಮನು ಪಾಪದಲ್ಲಿ ಬೀಳುವ ಮೂಲಕ ಇಡೀ ಮಾನವಕುಲವನ್ನು ಪ್ರಭಾವಗೋಳಿಸಿದ್ದಾನೆ. ಯಾವುದೇ ದೇಶ, ಜನಾಂಗಗಳಿಗೆ ಇದರಿಂದ ಮುಕ್ತಿಯಿಲ್ಲ. ನಾವೆಲ್ಲರೂ ಕೂಡ ಪಾಪದ ಫಲಿತಾಂಶವನ್ನು ಪಡೆಯಬೇಕು, ಮತ್ತು ಇದಕ್ಕೆ ಸರಿಯಾದ ಮದ್ದನ್ನು ನೀಡದೆ ಹೋದರೆ ನಾವೆಲ್ಲರೋ ಕೂಡ ಇದರ ಅಂತಿಮ ಫಲಿತಾಂಶವಾದ ನಿತ್ಯ ಮರಣವನ್ನು ಹೊಂದಬೇಕಾಗುತ್ತದೆ.

ಆ ಮದ್ದು, ಅದನ್ನು ಈಗಾಗಲೇ ಒದಗಿಸಲಾಗಿದೆ; ಯೇಸುವಿನ ಜೀವನ, ಮರಣ, ಮತ್ತು ಪುನರುತ್ಥಾನ ಹಾಗೂ ಆತನು ಪರಲೋಕದ ಗುಡಾರದಲ್ಲಿ ಸಲ್ಲಿಸುತ್ತಿರುವ ಸೇವೆಯು ಪಾಪದ ಸಮಸ್ಯೆಗೆ ಒದಗಿಸಲಾಗಿರುವ ಒಂದೇ ಒಂದು ಔಷಧವಾಗಿದೆ.ದೇವರು ಕ್ರಿಸ್ತನ ಮೂಲಕ ಒದಗಿಸಿರುವ ಈ ಮಹಾ ನಿರೀಕ್ಷೆಯನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಇದಕ್ಕಾಗಿಯೇ ಸೇವೆಂತ್ ಡೇ ಅಡ್ವೆಂಟಿಸ್ಟ್ಗರು

ಲೋಕದ ಎಲ್ಲಾ ಕಡೆಗೆ ಹೋಗಿ ಕ್ರಿಸ್ತನ ಕುರಿತಾಗಿ ಕೇಳದೆ ಇರುವ ಅನೇಕರನ್ನು ಅನೇಕರಿಗೆ ಈ ಸಂದೇಶವನ್ನು ನೀಡುತ್ತಿದ್ದಾರೆ.

**ಸುವಾರ್ತೆಯನ್ನು ಇತರರಿಗೆ ಸಾರುವುದರಿಂದ ಅದನ್ನು ಸಾರುವವರಿಗೆ ಹೇಗೆ ಸಹಾಯಕಾರಿಯಾಗುತ್ತದೆ? ಕ್ರಿಸ್ತನ ಬರೋಣಕ್ಕೆ ನಮ್ಮನ್ನು ನಾವು ಸಿದ್ದಪಡಿಸಿಕೊಳ್ಳಲು ಇತರರಿಗೆ ಸುವಾರ್ತೆಯನ್ನು ಸಾರುವುದು ಹೇಗೆ ನಮಗೆ ಸಹಾಯ ಮಾಡುತ್ತದೆ?**

**ಸೋಮವಾರ**

## ಶಿಲುಬೆಯ ಮೇಲಿನ ಕಳ್ಳನು ಮತ್ತು ನಿತ್ಯ ಸುವಾರ್ತೆ

**ಪ್ರಕಟಣೆ 14:6, ಮತ್ತಾಯ 24:14, 28:19 ನ್ನು ಓದಿರಿ. ಈ ವಚನಗಳಲ್ಲಿ ಕಾಣುವ ಸಾಮ್ಯತೆ ಏನು? ಈ ವಚನಗಳು ಸುವಾರ್ತೆಸಾರುವುದು ಮತ್ತು ಸಾಕ್ಷಿ ನೀಡುವುದು ಸಭೆಯ ಮೂಲ ಉದ್ದೇಶಕ್ಕೆ ಎಷ್ಟು ಪ್ರಾಮುಖ್ಯ ಎಂದು ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತವೆ?**

ಪ್ರಕಟನೆ 14:6 ರಲ್ಲಿ ಹೇಳಲಾಗಿರುವ ಸಂದೇಶವನ್ನು ಇಡೀ ಲೋಕಕ್ಕೆಲ್ಲಾ ಸಾರಬೇಕಾದ ಸುವಾರ್ತೆಯಾಗಿದೆ. ಇದು ಇಡೀ ಲೋಕಕ್ಕೆ ಒಂದು ನಿರೀಕ್ಷೆಯನ್ನು ನೀಡುವ ಸಂದೇಶವಾಗಿದೆ ಯಾಕೆಂದರೆ ಲೋಕವು ಯಾವುದೇ ರೀತಿಯ ನಿರೀಕ್ಷೆಯನ್ನು ನೀಡುವುದಿಲ್ಲ.

**ಲೂಕ 23:32–43 ನ್ನು ಓದಿರಿ. ನಿತ್ಯ ಸುವಾರ್ತೆಯು ಎಲ್ಲಾ ಪಾಪಿಗಳಿಗೂ ಯಾವ ರೀತಿಯ ನಿರೀಕ್ಷೆಯನ್ನು ನೀಡುತ್ತದೆ ಎಂದು ಈ ಕಥೆಯು ನಮಗೆ ತಿಳಿಸುತ್ತದೆ.?**

ಕಳ್ಳನ ಕುರಿತಾಗಿ ಬರೆಯುತ್ತಾ ಎಲೆನ್ ಜಿ ವೈಟಮ್ಮನವರು ಅವನು ಕಠಿಣವಾದ ಕಳ್ಳನಾಗಿದ್ದರೂ ಕೂಡ "**ಅವನು ಕ್ರಿಸ್ತನ ಕುರಿತಾಗಿ ಬಲವಾದ ನಿರ್ಧಾರವನ್ನು**

**ತೆಗೆದುಕೊಂಡಿದ್ದನು, ಮತ್ತು ಅವನು ಬಂಧಿಸಲ್ಪಡುವ ತನಕ, ಅಪರಾಧಿಯಾಗಿ ನಿರ್ಣಯ ಹೊಂದುವ ತನಕ ಮತ್ತು ಶಿಲುಬೆಯ ಮೇಲೆ ಸಾವಿಗೆ ಒಳಗಾಗುವ ತನಕ ಅವನು ಪಾಪದಲ್ಲಿ ಆಳಕ್ಕೆ ಇಳಿದುಹೋಗಿದ್ದನು". ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಎಜಸ್,ಪುಟ 749.**

ಆದರೂ ಕೂಡ, ಅವನಿಗೆ ಏನಾಯಿತು? ಅವನು ಶಿಲುಬೆಯ ಮೇಲೆ ತೂಗಾಡುವಾಗ ಯೇಸುವು ಯಾರು ಎಂಬುದರ ಕುರಿತಾಗಿ ಅವನಿಗೆ ತಿಳಿಯಿತು, ಮತ್ತು ಅವನು ಹೀಗೆ ಕೂಗಿದನು ಯೇಸುವೆ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೊ ಅಂದನು. (ಲೂಕ 23:42)

ಇದಕ್ಕೆ ಯೇಸುವು ಹೇಗೆ ಉತ್ತರ ಕೊಟ್ಟನು? ಒಳ್ಳೆಯದು ಸ್ನೇಹಿತನೇ ನಾನು ನಿನಗೆ ಸಹಾಯ ಮಾಡುತ್ತೇನೆ ನೀನು ಪಾಪದ ಅಳಕ್ಕೆ ಇಳಿದು ಹೋಗಿರುವೆ ನಿನ್ನ ಪಾಪದ ಕುರಿತಾಗಿ ಇನ್ನೂ ಯಾಕೆ ನೀನು ಪಶ್ಚಾತ್ತಾಪ ಪಟ್ಟಿಲ್ಲ? ಯೇಸುವು ತನ್ನ ಹಿಂದಿನ ಭೋಧನೆಯ ಒಂದು ಭಾಗವನ್ನು ಅಂದರೆ ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕ ರಾಜ್ಯದಲ್ಲಿ ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ (ಮತ್ತಾಯ 5:20) ಯೇಸುವು ಅವನ ಹಳೆಯ ಪಾಪವನ್ನು ಮತ್ತೆ ಕೆದಕಿ ಹೊರಗೆ ತಂದನೋ?

ಇಲ್ಲ, ಇದಕ್ಕೆ ಬದಲಾಗಿ, ಕ್ರಿಸ್ತನು ಆ ಅಪರಾಧಿಯ ಕಡೆಗೆ ತಿರುಗಿಕೊಂಡು ಈ ಅಪರಾಧಿಯು ತನ್ನಲ್ಲಿ ಯಾವುದೇ ರೀತಿಯ ನೀತಿಯನ್ನು ಹೊಂದಿರಲಿಲ್ಲ ಮತ್ತು ಇದಕ್ಕೆ ಮುಂಚೆ ಯೇಸುವನ್ನು ಅವನು ಶಪಿಸುತ್ತಾ ಇದ್ದನು (ಮತ್ತಾಯ 27:44). ಅವನನ್ನು ಯೇಸುವು ಹೊಸ ಮನುಷ್ಯನನ್ನಾಗಿ ನೋಡಿ ಹೀಗೆ ಹೇಳಿದನು ನಾನು ನಿನಗೆ ಹೇಳುತ್ತಿದ್ದೇನೆ, ನಾನು ನಿನಗೆ ಭರವಸೆಯನ್ನು ನೀಡುತ್ತಿದ್ದೇನೆ ನಿನ್ನ ಪಾಪಗಳು, ನಿನ್ನ ಅಪರಾಧಗಳು, ನಿನ್ನ ತಪ್ಪುಗಳು, ಎಲ್ಲವೂ ಕೂಡ ಕ್ಷಮಿಸಲ್ಪಟ್ಟಿವೆ. ಮತ್ತು ನೀನು ನನ್ನ ಜೊತೆಯಲ್ಲಿ ಪರಲೋಕದಲ್ಲಿ ಇರುವೆ (ಲೂಕ 23:43).

ಇಲ್ಲಿ ಮೊದಲನೇಯ ದೂತನ ಸಂದೇಶದ ನಿತ್ಯ ಸುವಾರ್ತೆ ಇದೆ. ಈ ಸತ್ಯವನ್ನು ಬಿಟ್ಟು ನಾವು ಸಬ್ಬತ್ತಿನ ಕುರಿತಾಗಿ, ಅಥವಾ ಸತ್ತವರ ಸ್ಥಿತಿಯ ಕುರಿತಾಗಿ ಯಾವುದೇ ಸಂದೇಶವನ್ನು ನೀಡಿದರೂ ಕೂಡ ಪ್ರಯೋಜನವಿಲ್ಲ. ಈ ಎಲ್ಲಾ ಸಿದ್ಧಾಂತಗಳ ಹೃದಯ ಭಾಗವಾದ ನಿತ್ಯ ಸುವಾರ್ತೆಯನ್ನು ಬಿಟ್ಟು ಬೇರೆ ಯಾವ ಭೋಧನೆಯು ಕೂಡ ಹೆಚ್ಚಿನ ಪ್ರಭಾವ ಬೀರುವುದಿಲ್ಲ.

**ಈ ಘಟನೆಯಿಂದ ನೀವು ಯಾವ ನಿರೀಕ್ಷೆಯನ್ನು ಪಡೆಯಬಹುದು?**

**ಮಂಗಳವಾರ**

## ದೇವರಿಗೆ ಭಯಪಟ್ಟು ಆತನಿಗೆ ಮಹಿಮೆಯನ್ನು ಸಲ್ಲಿಸಿರಿ

ಇಡೀ ಲೋಕಕ್ಕೆ ಸಾರಬೇಕಾದ ನಿತ್ಯ ಸುವಾರ್ತೆಯ ಕುರಿತಾಗಿ ಹೇಳಿದ ನಂತರ ಮೊದಲನೇಯ ದೂತನ ಸಂದೇಶವು ಈ ಸಂದೇಶಕ್ಕೆ ವಿಸ್ತಾರಗೊಳ್ಳುತ್ತದೆ. ನಾವು ನಿತ್ಯ ಸುವಾರ್ತೆಯನ್ನು ಪ್ರಕಟಿಸುವ ಹಾಗೆ ಈ ಸತ್ಯವು ಈ ಸಮಯಕ್ಕಾಗಿ ನೀಡಲಾಗಿರುವ ಸತ್ಯವಾಗಿದೆ ಎಂಬುದನ್ನು ನಾವು ಸೇರಿಸಿಕೊಳ್ಳಬೇಕು. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ಕೊನೆಯ ಕಾಲಕ್ಕೆ ಬೇಕಾದ ಪ್ರಸ್ತುತವಾದ ಸತ್ಯ ಇದರಲ್ಲಿ ಪ್ರಕಟಣೆ 147 ರ ಸಂದೇಶವು ಕೂಡ ಸೇರಿದೆ.

ಪ್ರಕಟನೆ 14:7 ನ್ನು ಓದಿರಿ. ದೇವರಿಗೆ ಭಯಪಟ್ಟು ಆತನಿಗೆ ಮಹಿಮೆ ಸಲ್ಲಿಸಿರಿ ಎಂಬುದರ ಅರ್ಥವೇನು? ನಾವು ಅದನ್ನು ಹೇಗೆ ಮಾಡುವುದು?ಈ ವಿವರಣೆಯು ಈ ಸಂದೇಶದಲ್ಲಿ ಹೇಗೆ ಸರಿಹೊಂದುತ್ತದೆ?

ದೇವರಿಗೆ ಭಯಪಟ್ಟು ಆತನಿಗೆ ಮಹಿಮೆ ಸಲ್ಲಿಸುವುದು ಸಂಬಂಧ ಹೊಂದದೆ ಇರುವ ವಿಷಯಗಳಲ್ಲ. ಸತ್ಯವೇದ ಆಧಾರಿತವಾಗಿ ನಾವು ದೇವರಿಗೆ ಭಯಪಟ್ಟರೆ ನಾವು ಆತನನ್ನು ಮಹಿಮೆ ಪಡಿಸುತ್ತೇವೆ. ಒಂದು ಮತ್ತೊಂದರ ಕಡೆಗೆ ನಡೆಸುತ್ತದೆ.

ಈ ಮುಂದಿನ ವಚನಗಳನ್ನು ಓದಿರಿ. ದೇವರಿಗೆ ಭಯಪಡುವುದರ ಮತ್ತು ಆತನಿಗೆ ಮಹಿಮೆ ಸಲ್ಲಿಸುವುದರ ಕುರಿತಾಗಿ ಅರ್ಥ ಮಾಡಿಕೊಳ್ಳಲು ಈ ವಚನಗಳು ಹೇಗೆ ಸಹಾಯ ಮಾಡುತ್ತವೆ. ಆದಿಕಾಂಡ 22:12, ವಿಮೋಚನೆಕಾಂಡ 20:20, ಯೋಬ 1:9, ಪ್ರಸಂಗಿ 12:13, ಮತ್ತಾಯ 5:16.

---

---

ಈ ಮೇಲಿನ ವಚನಗಳಲ್ಲಿ ದೇವರಿಗೆ ಭಯಪಡುವುದರ ಅರ್ಥವನ್ನು ಆತನಿಗೆ ಮಹಿಮೆಯನ್ನು ಸಲ್ಲಿಸುವುದರ ಜೊತೆಗೆ ಸೇರಿಸಲಾಗಿದೆ, ಮತ್ತು ನಾವು ದೇವರಿಗೆ ವಿಧೇಯತೆಯನ್ನು ತೋರಿಸಿದಾಗ ಮತ್ತು ಯಾವುದ ಸರಿಯಾದದ್ದೋ ಅದನ್ನು ಮಾಡಿದಾಗ ನಾವು ಆತನಿಗೆ ಮಹಿಮೆಯನ್ನು ತರುವವರಾಗಿದ್ದೇವೆ. ದೇವರಿಗೆ ಮಹಿಮೆ ಸಲ್ಲಿಸುವುದು ಎಂದರೆ ಆತನಿಗೆ ಭಯಪಟ್ಟು ಮತ್ತು ಆತನನ್ನು ಗೌರವಿಸುವುದಾಗಿದೆ, ಅದು ನಮ್ಮನ್ನು ಇನ್ನೂ ಹೆಚ್ಚಿನ ಆಳವಾದ ಅನುಭವಕ್ಕೆ ಕರೆದುಕೊಂಡು ಹೋಗಬೇಕು. ನಾವು ದೇವರಿಗೆ ಭಯಪದಬೇಕು ಎಂದು ಹೇಳಿದೆ.ನಾವು ಬಿದ್ದು ಹೋಗಿದ್ದೇವೆ, ನಾವು ಪಾಪಿಗಳು. ನಾವು ಮರಣಕ್ಕೆ ಒಳಗಾದವರು. ಕೆಟ್ಟ ಕಾರ್ಯಗಳನ್ನು ನಡಿಸಿದವರು ಯಾವ ಪ್ರತಿಫಲವನ್ನು ನೀತಿಯ ಮತ್ತು ನ್ಯಾಯಾಧಿಪತಿಯಾದ ದೇವರು ನೀಡುವ ಶಿಕ್ಷೆಯ ಯಾವ ಭಾಗವನ್ನು ಕೂಡ ನಾವು ಇನ್ನೂ ಅನುಭವಿಸಿಲ್ಲ? ಅದು ದೇವರ ಭಯ ಈ ಅನುಭವವು ಕ್ಷಮಾಪಣೆಗಾಗಿ ನಮ್ಮನ್ನು ಶಿಲುಬೆಯ ಕಡೆಗೆ ನಡೆಸುತ್ತದೆ, ಮತ್ತು ನಮ್ಮ ಪಾಪದಿಂದ ವಿಮುಕ್ತಿಯನ್ನು ಹೊಂದಲು ದೇವರ ಶಕ್ತಿಯ ಮೇಲೆ ಆಧಾರವಾಗಿರುವಂತೆ ನಮ್ಮನ್ನು ನಡೆಸುತ್ತದೆ, ಒಂದು ವೇಳೆ ಶಿಲುಬೆಯು ಇಲ್ಲದೆ ಹೋದರೆ ನಾವು ನಮ್ಮ ಆತ್ಮಗಳನ್ನು ಕಳೆದುಕೊಳ್ಳುತ್ತಿದ್ದೆವು. (ಮತ್ತಾಯ 10:28)

**ದೇವರಿಗೆ ಭಯಪಡುವುದರ ಕುರಿತಾಗಿ ನಿಮ್ಮ ಸ್ವಂತ ಅನುಭವ ಏನಾಗಿದೆ?**

**ಈ ಅನುಭವವು ಆತ್ಮೀಯವಾಗಿ ನಮಗೆ ಎಷ್ಟರ ಮಟ್ಟಿಗೆ ಸಹಾಯ ಮಾಡುತ್ತದೆ ಮತ್ತು ದೇವರು ನಮ್ಮಿಂದ ಏನು ಬಯಸುತ್ತಾನೆ ಮತ್ತು ನಮ್ಮ ನಂಬಿಕೆಯನ್ನು ಗಂಭಿರವಾಗಿ ಪರಿಗಣಿಸಲು ಇದು ಹೇಗೆ ಸಹಾಯ ಮಾಡುತ್ತದೆ?**

**ಬುಧವಾರ**

## ಆತನು ನ್ಯಾಯತೀರ್ಪು ಮಾಡುವ ಗಳಿಗೆಯು ಬಂದಿದೆ

ಮೊದಲನೇಯ ದೂತನ ಸಂದೇಶದಲ್ಲಿ ದೇವರಿಗೆ ಭಯಪಟ್ಟು ಆತನಿಗೆ ಮಹಿಮೆ ಸಲ್ಲಿಸುವುದನ್ನು ನ್ಯಾಯತೀರ್ಪಿನ ಜೊತೆಗೆ ಸೇರಿಸಲಾಗಿದೆ. (ಪ್ರಕಟಣೆ 14:7). ಸತ್ಯವೇದವು ಒಂದು ವೇಳೆ ಒಂದು ಭೋಧನೆಯಲ್ಲಿ ಸ್ಪಷ್ಟವಾಗಿದ್ದರೆ ಅದು ದೇವರು ನ್ಯಾಯ ಮತ್ತು ನ್ಯಾಯ ತೀರ್ಪಿನ ವಿಚಾರದಲ್ಲಿ ಬಹಳ ಸ್ಪಷ್ಟವಾಗಿದ್ದಾನೆ ಎಂದು ತಿಳಿಸುತ್ತದೆ. ನ್ಯಾಯ ತೀರ್ಪು ಮತ್ತು ನ್ಯಾಯ ಎರಡು ಕೂಡ ಈ ಲೋಕದಲ್ಲಿ ಬಹಳ ವಿರಳವಾಗಿ ಕಾಣುವ ದಿನಗಳು ಬಹಳ ದೂರವಿಲ್ಲ. ಆದ್ದರಿಂದ ಜನರು ದೇವರಿಗೆ ಭಯಪಡಬೇಕು.

ಇದರಿಂದಲೇ ನಿತ್ಯ ಸುವಾರ್ತೆಯು ನ್ಯಾಯ ತೀರ್ಪಿನ ವಾಸ್ತವತೆಯನ್ನು ಸೇರಿಸಿಕೊಂಡಿದೆ. ಈ ಎರಡು ವಿಚಾರಗಳ ಸಂಭಂದವೇನು? ಸುವಾರ್ತೆಯು ಒಳ್ಳೆಯ ಸಂದೇಶವೆಂದರೆ ನಾವೆಲ್ಲರೂ ಪಾಪಿಗಳಾಗಿ ದೇವರ ಆಜ್ಞೆಯನ್ನು ಮೀರಿರುವಾಗ ದೇವರ ನ್ಯಾಯ ತೀರ್ಪಿನ ದಿನವು ಬಂದಾಗ ಶಿಲುಬೆಯ ಮೇಲಿನ ಕಳ್ಳನ ಹಾಗೆ ನಾವು ಆಜ್ಞೆಗಳನ್ನು ಮೀರಿದ್ದಕ್ಕೆ ಪಾಪದ ಸಂಬಳ ಮತ್ತು ಶಿಕ್ಷೆಯನ್ನು ಅನುಭವಿಸದೆ ಇರುತ್ತೇವೆ.

**ಈ ಮುಂದಿನ ವಚನಗಳನ್ನು ಓದಿರಿ ಮತ್ತು ನಿಮ್ಮನ್ನು ನೀವು ಪ್ರಶ್ನಿಸಿಕೊಳ್ಳಿರಿ, ನಾನು ನನ್ನ ಸ್ವಂತ ಕ್ರಿಯೆಗಳ ಮೇಲೆ ಹೇಗೆ ಅಧಾರವಾಗಿರಬಹುದು? ಮತ್ತಾಯ 12:36, ಪ್ರಸಂಗಿ, 12:14, ರೋಮ 2:6, 1 ಕೊರಿಂಥ 4:5.**

ನಿಮ್ಮ ತಲೆ ಕೂದಲಿನ ಸಂಖ್ಯೆಯನ್ನು ತಿಳಿದಿರುವ ದೇವರು ಇಡೀ ಲೋಕಕ್ಕೆ ನ್ಯಾಯ ತೀರಿಸುವವನಾಗಿದ್ದಾನೆ. ಆದರೆ ಅದು ನಿತ್ಯ ಸುವಾರ್ತೆಯು ಯಾಕೆ ಅಷ್ಟೊಂದು ಒಳ್ಳೆಯ ಸಂದೇಶವೆಂದು ತಿಳಿಸುತ್ತದೆ. ನ್ಯಾಯ ತೀರ್ಪು ಬರುತ್ತದೆ, ಆದರೆ ಕ್ರಿಸ್ತನ ನಂಬಿಕೆಯ ಹಿಂಬಾಲಕರಿಗೆ ಯಾವುದೇ ರೀತಿಯ ಅಪರಾಧ ನಿರ್ಣಯವಿಲ್ಲ. ಯಾರು ಯೇಸು ಕ್ರಿಸ್ತನ ಹೆಸರಿನಲ್ಲಿ ಶುದ್ದರಾಗಿ, ಪರಿಶುದ್ದರಾಗಿ ಮಾತು ನ್ಯಾಯನಿರ್ಣಯ ಹೊಂದಿದ್ದಾರೋ ಅವರಿಗೆ ಯಾವ ಶಿಕ್ಷಾವಿಧಿಯು ಇಲ್ಲ. (1 ಕೊರಿಂಥ 6:11), ಯಾಕೆಂದರೆ ಕ್ರಿಸ್ತನು ಅವರ ನೀತಿಯಾಗಿದ್ದಾನೆ, ಮತ್ತು ಆತನ ನೀತಿಯು ಈ ನ್ಯಾಯತೀರ್ಪಿನಲ್ಲಿ ಅವರನ್ನು ಕಾಪಾಡುತ್ತದೆ.

**ಆ ನಿಂದನೆಗಳನ್ನು ಮನುಷ್ಯನು ತಾನಾಗಿ ಎದುರಿಸಲು ಸಾಧ್ಯವಿಲ್ಲ. ಪಾಪದಿಂದ ತುಂಬಿದ ವಸ್ತ್ರಗಳಲ್ಲಿ ಅವನ ಪಾಪವನು ಒಪ್ಪಿಕೊಂಡು ಅವನು ದೇವರ ಮುಂದೆ ನಿಲ್ಲುತ್ತಾನೆ. ಆದರೆ ನಮ್ಮ ಕರ್ತನಾದ ಯೇಸುವು ಯಾರಾರು ನಿಜವಾಗಿ ಪಶ್ಚಾತ್ತಾಪ ಹೊಂದಿದ್ದಾರೋ ಮತ್ತು ಆತನಿಗೆ ತಮ್ಮ ಆತ್ಮಗಳನ್ನು ಒಪ್ಪಿಸಿ ನಂಬಿಕೆಯನ್ನು ಕಾಪಾಡಿಕೊಂಡಿದ್ದಾರೋ ಅಂತಹವರ ಪರವಾಗಿ ವಾದವನ್ನು ಮಂಡಿಸುತ್ತಾನೆ. ಆತನು ಅವರ ಪರವಾಗಿ ವಾದಿಸಿ ಶಿಲುಬೆಯ ಆಧಾರದ ಮೇಲೆ ಅವರ ತಪ್ಪುಗಳನ್ನು ಒಡೆದುಹಾಕುತ್ತಾನೆ. ದೇವರ ಆಜ್ಞೆಗೆ ಆತನು ಸಲ್ಲಿಸಿದ ಪರಿಪೂರ್ಣವಾದ ವಿಧೇಯತೆ ಶಿಲುಬೆಯ ಮರಣದ ತನಕ ಆತನು ಸಹಿಸಿದ್ದರಿಂದ ಆತನಿಗೆ ಪರಲೋಕದಲ್ಲಿ ಮತ್ತು ಭೂಲೋಕದಲ್ಲಿ ಎಲ್ಲಾ ಅಧಿಕಾರವನ್ನು ಹೊಂದಿ ಮತ್ತು ಆತನು ತಂದೆಯ ಕರುಣೆ ಮತ್ತು ಸಮಾಧಾನವನ್ನು ಪಾಪಿಗಳ ಪರವಾಗಿ ಪಡೆಯುತ್ತಾನೆ. ಎಲೆನ್ ಜಿ ವೈಟ್, ಸಭೆಗೆ ಸಾಕ್ಷಿಗಳು ಸಂಪುಟ 5, ಪುಟ 471.**

ನ್ಯಾಯ ತೀರ್ಪಿನ ವಾಸ್ತವತೆಯು ನಮಗೆ ಕ್ಷಮಾಪಣೆಯ ಅವಶ್ಯಕತೆಯನ್ನು ಹೇಗೆ ತಿಳಿಸುತ್ತದೆ.? ನಿಮಗೆ ವಿರುದ್ದವಾಗಿ ತಪ್ಪು ಮಾಡಿದವರಿಗೆ ದೇವರು ನಿಮಗೆ ನೀಡಿರುವ ಕರುಣೆ ಮತ್ತು ಕ್ಷಮಾಪಣೆಯನ್ನು ಹೇಗೆ ನೀಡುವಿರಿ?

ಗುರುವಾರ

## ಪರಲೋಕ ಮತ್ತು ಭೂಲೋಕವನ್ನು ಉಂಟು ಮಾಡಿದಾತನನ್ನು ಆರಾಧಿಸಿರಿ

**ಪ್ರಕಟನೆ 14:6,7 ನ್ನು ಮತ್ತೊಮ್ಮೆ ಓದಿರಿ. ಮೊದಲನೇಯ ದೂತನ ಸಂದೇಶದಲ್ಲಿ ಕಾಣಬರುವ ವಿಶೇಷವಾದ ಅಂಶಗಳು ಯಾವುವು ಮತ್ತು ಅವು ಹೇಗೆ ಒಂದಕ್ಕೊಂದು ಸಂಭಂದ ಹೊಂದಿವೆ.?**

______________________________________________

______________________________________________

ಸುವಾರ್ತೆಯ ಜೊತೆಗೆ, ಲೋಕಕ್ಕೆ ಸಾಕ್ಷಿಯಾಗಿ ನಿಲ್ಲುವ ಮತ್ತು ದೇವರಿಗೆ ಭಯಪಟ್ಟು ಹಾಗೂ ಆತನಿಗೆ ಮಹಿಮೆಯನ್ನು ಸಲ್ಲಿಸುವುದರ ಜೊತೆಗೆ ಆತನನ್ನು ಸೃಷ್ಟಿಕರ್ತನಾಗಿ ಆರಾಧಿಸುವ ಕರೆಯು ಕೂಡ ಬರುತ್ತಿದೆ. ಇವೆಲ್ಲವೂ ಕೂಡ ಪ್ರಸ್ತುತವಾಗಿ ನಿತ್ಯ ಸುವಾರ್ತೆಯ ಭಾಗವಾಗಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ, ಸಾಕ್ಷಿಯಾಗಿ ಇರುವುದು, ದೇವರ ನ್ಯಾಯ ತೀರ್ಪು ಇವೆರಡನ್ನೂ ಕೂಡ ದೇವರನ್ನು ಸೃಷ್ಟಿಕರ್ತನಾಗಿ ಆರಾಧಿಸುವುದರಿಂದ ಭಿನ್ನವಾಗಿ ಹೇಗೆ ನೋಡುವುದು?ಈ ಸತ್ಯವೂ ಮತ್ತು ಇತರೆ ಸತ್ಯಗಳು ಎಲ್ಲವೂ ಕೂಡ ದೇವರು ಸಮಸ್ತವನ್ನು ನಿರ್ಮಿಸಿದ್ದಾನೆ ಎಂಬುದರ ಮೇಲೆ ಅಧಾರವಾಗಿವೆ. ಆತನನ್ನು ಎಲ್ಲಾದಕ್ಕೂ ಸೃಷ್ಟಿಕರ್ತನಾಗಿ ಆರಾಧಿಸುವ ಮೂಲಕ ನಾವು ಮೂಲ ಸಿದ್ದಾಂತಕ್ಕೆ ಮರಳುತ್ತಿದ್ದೇವೆ. ಲೋಕದಲ್ಲಿ ಇರುವ ಇತರೆ ಪ್ರಾಣಿಗಳ ಹಾಗೆ ಬದುಕುವುದು ಹೇಗೆ ಎಂಬುದರ ಮೂಲ ಪಾಠಕ್ಕೆ ಮರಳುತ್ತಿದೇವೆ. ದೇವರನ್ನು ಸೃಷ್ಟಿ ಕರ್ತನಾಗಿ ಆರಾಧಿಸುವ ಮೂಲಕ, ನಾವು ನಮ್ಮ ಉಳಿವಿಗಾಗಿ ಮತ್ತು ಭವಿಷ್ಯದ ನಿರೀಕ್ಷೆಗಾಗಿ ಆತನ ಮೇಲೆ ಅವಲಂಬಿತರಾಗಿದ್ದೇವೆ. ಇದರಿಂದಲೇ ಏಳನೇಯ ದಿನದ ಸಬ್ಬತ್ತನ್ನು ಆಚರಿಸುವುದು ಬಹಳ ಮುಖ್ಯವಾಗಿದೆ. ಇದು ದೇವರು ಮಾತ್ರ ನಮ್ಮ ಸೃಷ್ಟಿಕರ್ತನಾಗಿದ್ದಾನೆ ಮತ್ತು ನಾವು ಆತನನ್ನು ಮಾತ್ರ ಆರಾಧಿಸುತ್ತೇವೆ

ಎಂದು ತೋರಿಸುತ್ತದೆ. ಸುವಾರ್ತೆಯ ಜೊತೆಗೆ, ನ್ಯಾಯ ತೀರ್ಪಿನ ಜೊತೆಗೆ ಇಲ್ಲಿ ದೇವರನ್ನು ಸೃಷ್ಟಿ ಕರ್ತನಾಗಿ ಆರಾಧಿಸುವುದಕ್ಕೆ ಪ್ರಾಧಾನ್ಯತೆ ನೀಡಲಾಗಿದೆ.

**ಪ್ರಕಟನೆ 14:8–11. ಈ ವಚನಗಳು ದೇವರನ್ನು ಸೃಷ್ಟಿ ಕರ್ತನಾಗಿ ಆರಾಧಿಸುವುದರ ಪ್ರಾಮುಖ್ಯತೆಯನ್ನು ಹೇಗೆ ವಿವರಿಸುತ್ತವೆ?**

______________________________________________

______________________________________________

ಕೊನೆಯ ಘಟನೆಗಳು ನಡೆಯುವ ಹಾಗೆ, ಸೃಷ್ಟಿ ಕರ್ತನನ್ನು ಬಿಟ್ಟು ಮೃಗ ಮತ್ತು ಅದರ ವಿಗ್ರಹವನ್ನು ಆರಾಧಿಸುವ ಒತ್ತಡ ಇಡೀ ಲೋಕದ ಮೇಲೆ ಹೆಚ್ಚಾಗುತ್ತದೆ. ನಾವು ಮೃಗ ಮತ್ತು ಅದರ ವಿಗ್ರಹವನ್ನು ಆರಾಧಿಸುವವರಿಗೆ ಉಂಟಾಗುವ ಶಿಕ್ಷೆಯ ಪ್ರಮಾಣವನ್ನು ಗಮನಿಸಿದಾಗ ದೇವರನ್ನು ಮಾತ್ರ ಸೃಷ್ಟಿ ಕರ್ತನಾಗಿ ಆರಾಧಿಸುವ ಪ್ರಾಮುಖ್ಯತೆಯನ್ನು ಗಮನಿಸಬಹುದು ಯಾಕೆಂದರೆ ಆರಾಧನೆಗೆ ಆತನು ಮಾತ್ರ ಯೋಗ್ಯನು. ಕೊನೆಯ ಘಟನೆಗಳಲ್ಲಿ ಈ ಸತ್ಯವೂ ಎಲ್ಲಾ ವಿಷಯಗಳಿಗಿಂತ ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ.

**ಸೃಷ್ಟಿಸಲ್ಪಟ್ಟಿರುವ ವಿಷಯಗಳ ಕುರಿತಾದ ಅದ್ಭುತಗಳ ಕುರಿತಾಗಿ ಆಲೋಚಿಸಿಲು ಸ್ವಲ್ಪ ಸಮಯವನ್ನು ತೆಗೆದುಕೊಳ್ಳಿರಿ  ಅವುಗಳನ್ನು ಸೃಷ್ಟಿಸಿದ ಸೃಷ್ಟಿ ಕರ್ತನ ಕುರಿತಾಗಿ ಏನು ಹೇಳುತ್ತವೆ ಮತ್ತು ಯಾಕೆ ಆತನು ಮಾತ್ರ ಆರಾಧನೆಗೆ ಯೋಗ್ಯನು ಎಂದು ತಿಳಿಸುತ್ತದೆ?**

**ಶುಕ್ರವಾರ**

**ಮುಂದಿನ ಆಲೋಚನೆ :** ಸತ್ಯವೇದದ ವಿಧ್ಯಾರ್ಥಿಗಳು ಪ್ರಕಟನೆ 14:7 ರಲ್ಲಿ ಇರುವ ಆಕಾಶವನ್ನು ಭೂಮಿಯನ್ನು ಸಮುದ್ರವನ್ನು ಮತ್ತು ನೀರಿನ ಬುಗ್ಗೆಗಳನ್ನು ಸೃಷ್ಟಿಸಿದಾತನನ್ನು ಆರಾಧಿಸಿರಿ ಮತ್ತು ವಿಮೋಚನೆಕಾಂಡ 20:11 ರಲ್ಲಿರುವ ನಾಲ್ಕನೇಯ ಆಜ್ಞೆಯ ನಡುವೆ ಇರುವ ಸಂಬಂಧವನ್ನು ಮುಂದೆಯೇ

ಗುರುತಿಸಿದ್ದಾರೆ.ಸಬ್ಬತ್ತು ಆರು ದಿನಗಳಲ್ಲಿ ದೇವರು ಆಕಾಶವನ್ನು ಮತ್ತು ಭೂಮಿಯನ್ನು, ಸಮುದ್ರವನ್ನು ಮತ್ತು ಅದರಲ್ಲಿರುವ ಸಮಸ್ತವನ್ನು ಸೃಷ್ಟಿಸಿದನು ಎಂಬುದನ್ನು ಒತ್ತಿಹೇಳುವಾಗ ನಾವು ಗಮನಿಸಬೇಕಾಗಿರುವುದು ಈ ಎರಡೂ ವಚನಗಳಲ್ಲಿರುವ ಭಾಷೆಯು ಒಂದೇ ಆಗಿದ್ದರೂ ಕೂಡ ಪ್ರಕಟಣೆಯಲ್ಲಿ ನೀರಿನ ಬುಗ್ಗೆಗಳನ್ನು ಉಂಟುಮಾಡಿದವನು ಎಂಬುದು ವ್ಯತ್ಯಾಸವಾಗಿದೆ.

ಲೇಖಕರಾದ ಜಾನ್ ಬಾಲ್ಡ್ವಿನ್ ಹೀಗೆ ಹೇಳುತ್ತಾರೆ. **"ನೀರಿನ ಬುಗ್ಗೆಗಳ ಕುರಿತಾಗಿ ದೇವರ ಪ್ರೇರಣೆಯನ್ನು ನಾವು ಆಲೋಚಿಸುವಾಗ ವಿಮೋಚನೆಕಾಂಡದಲ್ಲಿ ಕಾಣ ಬರುವ ಸರದಿಯನ್ನು ಪ್ರಕಟಣೆಯ ಬರಹಗಾರನು ಯಾಕೆ ಅದನ್ನು ಬೇರ್ಪಡಿಸಿದನು ಎಂದು ಯೋಚಿಸಬೇಕು. ಯಾಕೆ ದೂತನು ಸೃಷ್ಟಿಸಲಾಗಿರುವ ಬೇರೆ ಯಾವ ವಸ್ತುವಿನ ಅಥವಾ ಪಕ್ಷಿ, ಮರಗಳು, ಮೀನು, ಅಥವಾ ಬೆಟ್ಟಗಳ ಕುರಿತಾಗಿ ಹೇಳದೆ ನೀರಿನ ಬುಗ್ಗೆಗಳ ಕುರಿತಾಗಿ ಯಾಕೆ ಹೇಳುತ್ತಾನೆ? ಬಹುಶಃ ನೀರಿನ ಬುಗ್ಗೆಗಳ ಉಲ್ಲೇಖ ಈ ವಚನದ ಹಿನ್ನಲೆಯಲ್ಲಿ ನೋಡುವುದಾದರೆ ಬರಲಿರುವ ನ್ಯಾಯ ತೀರ್ಪಿನ ಕುರಿತಾಗಿ ಮತ್ತು ಈ ನಡೆಯುತ್ತಿರುವ ನ್ಯಾಯ ತೀರ್ಪಿನ ಎಚ್ಚರಿಕೆಯನ್ನು ನೀಡುವುದಕ್ಕಾಗಿ ಉಪಯೋಗಿಸಲಾಗಿದೆ. ಒಂದು ವೇಳೆ ದೇವರು ನೀರಿನ ಬುಗ್ಗೆಗಳ ಕುರಿತಾಗಿ ಪ್ರಸ್ತಾಪಿಸುವಾಗ ದೇವರ ನ್ಯಾಯದ ಕುರಿತಾಗಿ ಹೇಳುತ್ತಿರಬಹುದು. ಇದರ ಜೊತೆಗೆ ದೇವರು ನ್ಯಾಯತೀರಿಸುವ ಮತ್ತು ಕರುಣೆಯುಳ್ಳ ದೇವರು (ಈ ಎರಡೂ ಅಂಶಗಳು ಕೂಡ ಆದಿಕಾಂಡದ ಜಲಪ್ರಳಯದ ಸಮಯದಲ್ಲಿ ಕಾಣುತ್ತವೆ). ಹಾಗಾದರೆ, ಜಲಪ್ರಳಯವು ವ್ಯಯಕ್ತಿಕವಾದ ಮತ್ತು ಆತ್ಮಿಯವಾದ ನ್ಯಾಯ ತೀರ್ಪಿನ ಕುರಿತಾಗಿ ಹೇಳುತ್ತದೆ. ನೀರಿನ ಬುಗ್ಗೆಗಳ ಮಾತಿನ ಉಲ್ಲೇಖವು ಓದುಗರಿಗೆ ಕೊನೆಯ ಕಾಲದಲ್ಲಿ ದೇವರು ನೀಡುವ ತೀರ್ಪಿನ ಕುರಿತಾಗಿ ಎಚ್ಚರಿಕೆಯಾಗಿರುವಂತೆ ತಿಳಿಸುತ್ತದೆ, ಮತ್ತು ಇದನ್ನು ಪ್ರಕಟಣೆಯ ಮೊದಲನೇಯ ಸಂದೇಶಕನು ಬಹಳ ಸ್ಪಷ್ಟವಾಗಿ ಪ್ರಕಟಿಸುತ್ತಾನೆ. ಜಾನ್ ಬಾಲ್ಡ್ವಿನ್, ಕ್ರಿಯೇಶನ್ ಅಂಡ್ ರೆವೆಲಶನ್. ಪುಟ 27.**

## ಚರ್ಚಿಸಬೇಕಾದ ಪ್ರಶ್ನೆಗಳು:

1. ಯೆಶಾಯ 53:6 ಹೀಗೆ ಹೇಳುತ್ತದೆ. ನಾವೆಲ್ಲರೂ ಕುರಿಗಳ ಹಾಗೆ ದಾರಿ ತಪ್ಪಿ ತೊಳಲುತ್ತಿದ್ದೆವು ನಾವೆಲ್ಲರೂ ಎಂಬ ಪದಕ್ಕೆ ಇಬ್ರಿಯ ಭಾಷೆಯಲ್ಲಿ ಕುಲ್ಲನ್ ಎಂದು ಹೇಳುತ್ತಾರೆ. ಅದೇ ವಚನದಲ್ಲಿ ಯೆಶಾಯನು ದೇವರು ನಮ್ಮೆಲ್ಲರ ದೋಷವನ್ನು ಯೇಸುವಿನ ಮೇಲೆ ಹಾಕಿದನು ಇಲ್ಲಿಯೂ ಕೂಡ ನಮ್ಮೆಲ್ಲರ ಪದಕ್ಕೆ ಕುಲ್ಲನ್ ಪದವನ್ನು ಉಪಯೋಗಿಸುತ್ತಾರೆ. ಪಾಪದ ಪ್ರಭಾವ ಎಷ್ಟೇ ಇದ್ದರೂ ಕೊಡ ಅದಕ್ಕೆ ಬೇಕಾದ ಪರಿಹಾರವನ್ನು ದೇವರು ಕಂಡುಹಿಡಿದಿದ್ದಾನೆ ಎಂದು ಅರ್ಥ ಮಾಡಿಕೊಳ್ಳಲು ಇದು ಹೇಗೆ ಸಹಾಯ ಮಾಡುತ್ತದೆ?

2. ಶಿಲುಬೆಯು ಮೇಲಿನ ಕಳ್ಳನ ಅನುಭವದಿಂದ ನಾವು ಏನು ಕಲಿಯಬಹುದು?ಒಂದು ವೇಳೆ ಆ ಕಳ್ಳನು ಶಿಲುಬೆಯ ಮೇಲಿಂದ ಇಳಿಸಲ್ಪಟ್ಟು ಬದುಕಿ ಉಳಿದಿದ್ದರೆ ಅವನ ಜೀವನ ಎಷ್ಟು ಬದಲಾವಣೆ ಹೊಂದಿರುತ್ತದೆ ಎಂಬುದರ ಕುರಿತಾಗಿ ಯೋಚಿಸಿರಿ? ನಮ್ಮ ಜೀವನಗಳನ್ನು ಬದಲಾಯಿಸಲು ಯೇಸುವಿನ ಶಕ್ತಿಯ ಕುರಿತಾಗಿ ನೀವು ಹೇಗೆ ಉತ್ತರಿಸುತ್ತಿರಿ.